ಸದಸ್ಯರುಗಳಿಗೂ ಅವಕಾಶವನ್ನು ಕೊಡಬೇಕಾಗುತ್ತದೆ. ಕೆಲವು ಸಲ ತಾವು ಸಹಕರಿಸಬೇಕಾಗುತ್ತದೆ. ತಾವುಗಳೆಲ್ಲರೂ ಅನ್ಯಥಾ ಭಾವಿಸಬಾರದು, ಸಹಕರಿಸಬೇಕು. ಇವೊತ್ತು ನಮ್ಮ ಹೊಸ ಸದಸ್ಯರುಗಳೆಲ್ಲರೂ ಉಪಪ್ರಶ್ನೆಗಳನ್ನು ಕೇಳಿದಾಗ ನನ್ನ ಮನಸ್ಸಿಗೆ ಸಂತೋಷವಾಯಿತು. ಅವರುಗಳಿಗೆ ಯಾವಾಗ ಅವಕಾಶ ಸಿಗಬೇಕು ಹೇಳಿ? ಹೊಸ ಸಚಿವರಾದ ಮಾನ್ಯ ಶಿವಣ್ಣನವರು ಬಹಳ ಚೆನ್ನಾಗಿ ಯೋಗ್ಯವಾದಂಥ ರೀತಿಯಲ್ಲಿ ರಿಪ್ಲೈ ಕೊಟ್ಟರು. We have a duty to promote some of them to the stage of learning.

ಪ್ರಕಟಣೆ

ಅಧ್ಯಕ್ಷರು:- (i)ವಿಷಯ:- ವಿದ್ಯುತ್ ದರವನ್ನು ಪುನರ್‌ವಿಮರ್ಷಿಸುವ ಸಮಿತಿಗೆ ಕೆಲವು ಸದಸ್ಯರ ನೇಮಕ.

ರಾಜ್ಯದಲ್ಲಿ ವಿದ್ಯುತ್‌ದರವನ್ನು ಪುನರ್ ವಿಮರ್ಶಿಸುವಲ್ಲಿ ರಚಿಸಲಾದ ಸಮಿತಿಗೆ ಶ್ರೀಮತಿ ಬಿ.ಬಿ.ಹೇಮಾವತಿಯವರನ್ನು ಸಹ ಸದಸ್ಯರನ್ನಾಗಿ ನೇಮಕ ಮಾಡುತ್ತೇನೆ. ಮೊನ್ನೆ ಮಾಡಿದ ಸಮಿತಿಯಲ್ಲಿ ಹೆಣ್ಣುಮಕ್ಕಳನ್ನು ಯಾರನ್ನೂ ಸೇರಿಸಿರಲಿಲ್ಲ. ಈ ಎಇಹೆಚ್ ಪ್ರಶ್ನೆ ಇತ್ಯಾದಿಗಳು ಬರುತ್ತವೆ. ಈ ಕಾರಣಕ್ಕಾಗಿ ಲೇಡೀಸ್ ರೆಪ್ರಸೆಂಟೇಟಿವ್ ಆಗಿ ಒಬ್ಬರು ಇರಲಿ ಎಂದು ಅವರನ್ನು ಸೇರಿಸಿದ್ದೇನೆ. ಈಗಾಗಲೇ ನೇಮಕ ಮಾಡಿರುವ ಶ್ರೀ ಚಂದ್ರಶೇಖರ ನಾಯಕ್ - (ಗೋಕಾಕ್) ಅವರ ಬದಲಿಗೆ ಶ್ರೀ ಬಿ.ಬಿ.ಹಿರೇರೆಡ್ಡಿಯವರನ್ನು ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಿರುತ್ತೇನೆ. ಸಮಿತಿಯಲ್ಲಿ ಒಟ್ಟು ವಿಧಾನ ಸಭೆಯ 20ಸದಸ್ಯರನ್ನು ಒಳಗೊಂಡಿರುತ್ತದೆ. ಮಾನ್ಯ ಚಂದ್ರಶೇಖರ್ ನಾಯಕ್‌ರವರು ವಿದೇಶ ಪ್ರವಾಸಕ್ಕೆ ಹೋಗುತ್ತಿರುವುದರಿಂದ ಅವರು ಇರುವುದಿಲ್ಲ ಎಂಬ ಕಾರಣಕ್ಕಾಗಿ ಅವರ ಬದಲಿಗೆ ಹಿರೇರೆಡ್ಡಿಯವರನ್ನು ನೇಮಕ ಮಾಡಿದ್ದೇನೆ.

(ii)ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ರ್ಯಾಜದಲ್ಲಿ ವಿದ್ಯುತ್ ದರವನ್ನು ಪುನರ್‌ಪರಿಶೀಲಿಸುವ ಬಗ್ಗೆ ಪರಿಶೀಲಿಸಲು ರಚಿಸಲಾದ ಜಂಟಿಸದನದ ಸಮಿತಿಗೆ ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿದೆ. ಈ ಕೆಳಕಂಡ ವಿಧಾನಪರಿಷತ್ತಿನ ಸದಸ್ಯರನ್ನು ಜಂಟಿ ಸದನ ಸಮಿತಿಗೆ ನಾಮನಿರ್ದೇಶನ ಮಾಡಲಾಗಿದೆ ಎಂದು ಈ ಮೂಲಕ ತಿಳಿಸುತ್ತಿದ್ದೇನೆ. ಶ್ರೀಯುತರುಗಳಾದ : ಭೀಮಣ್ಣ ಖಂಡ್ರೆ, ಎನ್.ಸಿ.ಮಾಧುರಾಜು, ಡಾ.ವಿ.ಎಸ್.ಆಚಾರ್ಯ, ಡಾ: ಎಂ.ಪಿ.ನಾಡಗೌಡ, ವಿ.ಎಸ್.ಉಗ್ರಪ್ಪ, ಕೆ.ಸಿ.ಪುಟ್ಟಸಿದ್ಧ ಶೆಟ್ಟಿ.